Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 299/2024

ಸಿ ಡಬ್ಲ್ಯೂ-4
ಪಿ ಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | :- | ಬಸವರಾಜ |
| ತಂದೆಯ ಹೆಸರು | :- | ಚನ್ನವೀರಪ್ಪ |
| ವಯಸ್ಸು | :- | 41 ವರ್ಷ |
| ಉದ್ಯೋಗ | :- | ಚಾಲಕ ಕಮ್ ನಿರ್ವಾಹಕ, ಬಿ.ಎಮ್.ಟಿ.ಸಿ ಬೆಂಗಳೂರು |
| ವಾಸಸ್ಥಳ | :- | ಬೆಂಗಳೂರು |

**ದಿ.05-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ನಾನು 2020 ರಿಂದ 2023 ವರೆಗೆ ಕೆ.ಎಸ್.ಆರ್.ಟಿ.ಸಿ ಸಿಂದನೂರು ಘಟಕದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಚಾ.ಸಾ-1 ನಮ್ಮ ಬಸ್ಸಿನ ನಿರ್ವಾಹಕ. ಚಾ.ಸಾ-5 ರಿಂದ 7 ರವರ ಪರಿಚಯ ಇಲ್ಲ. ದಿನಾಂಕ 06-03-2023 ರಿಂದ 09-03-2023 ವರೆಗೆ ಅಮರೇಶ್ವರ ಜಾತ್ರಾ ವಿಶೇಷ ವಾಹನ ಕರ್ತವ್ಯಕ್ಕೆ ನೇಮಿಸಿರುತ್ತಾರೆ. ದಿನಾಂಕ 09-03-2023 ರಂದು ಸಂಜೆ 4-00 ಗಂಟೆಗೆ ಲಿಂಗಸುಗೂರು ಬಸ್ ನಿಲ್ದಾಣದಿಂದ ಬಸ್ ನಂ.28, ಎಫ್-1781 ರಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಅಮರೆಶ್ವರ ಜಾತ್ರೆಗೆ ಹೋರಟಿದ್ದು ಮಾರ್ಗ ಮದ್ಯ ಹೊನ್ನಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ 20 ಜನ ಪ್ರಯಾಣಿಕರು ಬಸ್ಸಿಗಾಗಿ ಕಾಯುತ್ತಿದ್ದರು. ಅದೇ ಸಂದರ್ಭದಲ್ಲಿ ಟಾಟಾ ಮ್ಯಾಜಿಕ್ ವಾಹನದ ಚಾಲಕ ಸದರಿ ವಾಹನವನ್ನು ತಂದು ನಮ್ಮ ಬಸ್ಸಿನ ಮುಂದೆ ನಿಲ್ಲಿಸಿರುತ್ತಾನೆ. ಪ್ರಯಾಣಿಕರು ಖಾಸಗಿ ವಾಹನದ ಬದಲಾಗಿ ನಮ್ಮ ಬಸ್ಸನ್ನು ಹತ್ತಿರುತ್ತಾರೆ. ಆದ ಕಾರಣ ಆಟೋ ಚಾಲಕನು ಸಿಟ್ಟಿನಿಂದ ನಮ್ಮ ಬಸ್ಸಿಗೆ ಮುಂದೆ ಅಡ್ಡಡ್ಡವಾಗಿ ದಾರಿ ಬಿಡದೆ ತಮ್ಮ ಆಟೋವನ್ನು ಚಾಲನೆ ಮಾಡಿಕೊಂಡು ಯರಡೋಣ ಕ್ರಾಸವರೆಗೆ ಹೋಗಿರುತ್ತಾನೆ. ಇದಾದ ನಂತರ ನಾವು ಅಮರೇಶ್ವರ ಜಾತ್ರೆಗೆ ಹೋಗಿ ಪ್ರಯಾಣಿಕರನ್ನು ಇಳಿಸಿ ಮತ್ತೆ ಪ್ರಯಾಣಿಕರನ್ನು ಹತ್ತಿಸಿಕೊಂಡು ವಾಪಸ್ ಬರುವಾಗ ಸುಮಾರು ಸಂಜೆ 5-00 ಗಂಟೆಗೆ ಆಟೋ ಚಾಲಕನಾದ ಸಿದ್ದಾರೂಡ ತಂದೆ ಶರಣಪ್ಪ ಮತ್ತು ಆತನ ಹಿಂಬಾಲಕರು 4 ಜನ ದ್ವಿಚಕ್ರ ವಾಹನಗಳಲ್ಲಿ ಬಂದು ಕೆಎ-36, ಇಡಿ-6396, ಇನ್ನೊಂದು ನಂಬರ್ ಪ್ಲೇಟಿಗೆ ಬಟ್ಟೆ ಹೊದಿಸಿರುತ್ತಾರೆ. ನಮ್ಮ ಬಸ್ಸಿಗೆ ಅಡ್ಡ ಬಂದು ನನಗೆ ಕೆಳಗೆ ಇಳಿಸಿ ಲೇ ಸೂಳೆ ಮಗನೆ ನಮ್ಮ

ಆಟೋ ಪ್ರಯಾಣಿಕರನ್ನು ನೀನು ಹೇಗೆ ಹತ್ತಿಸಿಕೊಂಡು ಎಂದು ಮುಷ್ಟಿಯಿಂದ 4 ಜನ ಸೇರಿ ನನಗೆ ಹಲ್ಲೆ ಮಾಡಿ ಚಪ್ಪಲಿಯಿಂದ ಹೊಡೆದಿರುತ್ತಾರೆ. ಇದಾದ ನಂತರ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನಗೆ ಬಾಯಿಗೆಲ್ಲ ಹೊಡೆದು ಮೈ-ಕೈಗೆ, ಬೆನ್ನಿಗೆ ಒದ್ದಿರುತ್ತಾರೆ. ಚಾ.ಸಾ-1 ರವರು ನಿರ್ವಾಹಕನಾಗಿದ್ದು ಇಳಿದು ಬಂದು ಬಿಡಿಸಿ ಚಾಲಕನನ್ನು ಪ್ರಥಮ ಚಿಕಿತ್ಸೆಗಾಗಿ ಲಿಂಗಸುಗೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ರಾಯಚೂರಿನ ನವೀನ ಆಸ್ಪತ್ರೆಗೆ ಶಿಪಾರಸ್ಸು ಮಾಡಿರುತ್ತಾರೆ. ಆರೋಪಿತರು ನನ್ನ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ. ನಂತರ ಚಾ.ಸಾ-1 ರವರು ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿ ಲಿಂಗಸುಗೂರು ಪೋಲಿಸ್ ಠಾಣೆಗೆ ದೂರು ನೀಡಿರುತ್ತಾರೆ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿರುತ್ತಾರೆ. ಆರೋಪಿ ಗೈರು ಹಾಜರಿದ್ದು ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ.

**<u>ಪಾಟೀ ಸವಾಲು ಶ್ರೀ ಎಸ್.ಹೆಚ್.ಜಿ ವಕೀಲರಿಂದ : -</u>**

ಪೋಲಿಸ್ ಠಾಣೆಗೆ ನನ್ನನ್ನು ಕರೆಸಿರುವುದಿಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ. ಪೋಲಿಸರು ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಆರೋಪಿತನ ಊರು ಗುಡದನಾಳ. ಆ ದಿನವೇ ಈತನೇ ಸಿದ್ದಾರೂಢ ಎಂದು ಹೆಸರು ನನಗೆ ಗೊತ್ತಿರಲಿಲ್ಲ ಎಂದರೆ ಸರಿ. ಆ ದಿನ ಯಾವುದೇ ಘಟನೆ ನಡೆದಿಲ್ಲ ಆರೋಪಿ ನಮ್ಮ ಬಸ್ಸನ್ನು ಅಡ್ಡಗಟ್ಟಿ ನಿಲ್ಲಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಹಲ್ಲೆ ಮಾಡಿಲ್ಲ ಯಾವುದೇ ಕರ್ತವ್ಯಕ್ಕೆ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.